## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದ ಗ್ರಾಮ ಪಂಚಾಯತಿಗಳ ಕಾರ್ಯನಿರ್ವಹಣೆಯನ್ನು ಪ್ರೋತ್ಸಾಹಿಸಲು ಗಾಂಧಿ ಗ್ರಾಮ ಪುರಸ್ಕಾರ ಯೋಜನೆ ಅನುಷ್ಠಾನ ಮಾಡುವ ಬಗ್ಗೆ.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯವು ತನ್ನಲ್ಲಿನ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನ, ಅಧಿಕಾರ ಮತ್ತು ಅಧಿಕಾರಿಗಳನ್ನು ವ್ಯಾಪಕ ಗತಿಯಲ್ಲಿ ವರ್ಗಾಯಿಸುವಲ್ಲಿ ಸದಾ ಮುಂಚೂಣಿಯಲ್ಲಿದೆ. 24 ಇಲಾಖೆಗಳ 29 ವಿಷಯಗಳು ಪಂಚಾಯತ್ ರಾಜ್ ಸಂಸ್ಥೆಗಳ ನೇರ ನಿಗಾವಣೆಯಲ್ಲಿ ಬರುತ್ತವೆ. ಈ ಎಲ್ಲಾ ಇಲಾಖೆಗಳಲ್ಲಿ ಸರಿಸುಮಾರು ಮೂರುವರೆ ಲಕ್ಷಗಳಿಗಿಂತಲೂ ಅಧಿಕ ಸಂಖ್ಯೆಯ ನೌಕರರು ಪಂಚಾಯತ್ ರಾಜ್ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕದ ಪಂಚಾಯತ್ ರಾಜ್ ವ್ಯವಸ್ಥೆಯಡಿ ಇದುವರೆಗೆ ಅಗಾಧವಾದುದನ್ನು ಸಾಧಿಸಲಾಗಿದೆ. ಸಾಧಿಸಬೇಕಾದುದು ಸಹ ಬಹಳಷ್ಟಿದೆ. ಈ ಪರಿಕ್ರಮದಲ್ಲಿ ರಾಜ್ಯ ಸರ್ಕಾರವು ತನ್ನ ಬದ್ಧತೆಯನ್ನು ಪ್ರದರ್ಶಿಸುತ್ತದೆ. ಕರ್ನಾಟಕದ ಪಂಚಾಯತ್ ಸಂಸ್ಥೆಗಳ ಆಡಳಿತ ವ್ಯವಸ್ಥೆಯಲ್ಲಿ ಮತ್ತಷ್ಟು ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ಶೀಘ್ರತೆಯನ್ನು ತರುವ ಉಪಕ್ರಮಗಳಾಗಿ ಈಗಾಗಲೇ ಹಲವಾರು ಉತ್ತೇಜನ ಕ್ರಮಗಳನ್ನು ಅನುಸರಿಸಲಾಗುತ್ತಿದೆ. ಉತ್ತೇಜನ ಕ್ರಮಗಳ ಒಂದು ಭಾಗವಾಗಿ 2013–14ರ ಪರಿಷ್ಕೃತ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನಂತೆ ಘೋಷಿಸಿದ್ದಾರೆ: "383".ಕೆಲವು ಆಡಳಿತ ಮತ್ತು ಆರ್ಥಿಕ ಮಾನದಂಡಗಳ ಆಧಾರದ ಮೇಲೆ ಗ್ರಾಮ ಪಂಚಾಯತಿಗಳು ಸಾಧಿಸುವ ಶೇಕಡಾ 90 ರಿಂದ ಶೇಕಡಾ 95ರಷ್ಟು ಸಾಧನೆಯನ್ನು ಮೌಲ್ಯಮಾಪನ ಮಾಡಿ ಅದಕ್ಕೆ ಸೂಕ್ತ ಪ್ರೋತ್ಸಾಹಧನ ನೀಡಲಾಗುವುದು." ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು "ಗಾಂಧಿ ಗ್ರಾಮ ಪುರಸ್ಕಾರ ಯೋಜನೆ"ಯನ್ನು ಜಾರಿಗೆ ತರಲು ನಿರ್ಣಯಿಸಿದೆ. ರಾಜ್ಯದಲ್ಲಿ ಉತ್ತಮ ಕಾರ್ಯ ಸಾಧನೆ ಮಾಡಿರುವ ಗ್ರಾಮ ಪಂಚಾಯತಿಗಳನ್ನು ಗುರುತಿಸಿ, ಅವುಗಳಿಗೆ ಉತ್ತೇಜನ ಅನುದಾನಗಳನ್ನು ಬಿಡುಗಡೆ ಮಾಡಿ, ಈ ಪಂಚಾಯತಿಗಳು ಮತ್ತಷ್ಟು ಉತ್ತಮ ಕೆಲಸಗಳನ್ನು ಮಾಡಲು ಅವಕಾಶ ಮಾಡಿಕೊಡುವುದು ಈ ಯೋಜನೆಯ ಉದ್ದೇಶವಾಗಿದೆ. ಅಂತಯೇ ಈ ಪಂಚಾಯತಿಗಳ ಕಾರ್ಯ ಸಾಧನೆಯು ಮಾದರಿಯಾಗಿ ನಿಂತು ಇತರೆ ಪಂಚಾಯತಿಗಳಿಗೂ ಸಹ ಪ್ರೇರಣೆಯಾಗಲಿ ಎಂದು ಆಶಿಸಲಾಗಿದೆ.

ಈ ಯೋಜನೆಯಡಿ ಪ್ರತಿ ತಾಲ್ಲೂಕಿನಿಂದ ಉತ್ತಮ ಆಡಳಿತ ಮತ್ತು ಆರ್ಥಿಕ ಕಾರ್ಯ ಸಾಧನೆ ಮಾಡಿರುವ ಒಂದು ಗ್ರಾಮ ಪಂಚಾಯತಿಯನ್ನು ಗುರುತಿಸಿ ತಲಾ ರೂ. 2.00 ಲಕ್ಷಗಳ ಉತ್ತೇಜನ ಅನುದಾನವನ್ನು ನೀಡಲು ಉದ್ದೇಶಿಸಲಾಗಿದೆ. ಗಾಂಧಿ ಗ್ರಾಮ ಪುರಸ್ಕಾರ ಯೋಜನೆಯ ಬಗ್ಗೆ ಪರಿಚಯ, ಯೋಜನೆಯ ಮಾರ್ಗದರ್ಶಿ ಸೂತ್ರಗಳು, ಯೋಜನೆಯಡಿ ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಲು ನಿಗಧಿಪಡಿಸಲಾದ ಮಾನದಂಡಗಳು, ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಿ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲು ನಿಗಧಿಪಡಿಸಲಾದ ಅಂತಿಮ ದಿನಾಂಕಗಳನ್ನು ವಿವರಿಸಿ ಸರ್ಕಾರದ ಆದೇಶವೊಂದನ್ನು ಹೊರಡಿಸುವ ಅಗತ್ಯವಿದೆ. ಅದಕ್ಕಾಗಿ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 91 ತಾಪಸ 2013, ಬೆಂಗಳೂರು, ದಿನಾಂಕ:23.11.2013**

ಮೇಲಿನ ಎಲ್ಲಾ ಪ್ರಸ್ತಾವನೆಗಳನ್ನು ಗಣನೆಗೆ ತೆಗೆದುಕೊಂಡು, "ಗಾಂಧಿ ಗ್ರಾಮ ಪುರಸ್ಕಾರ ಯೋಜನೆ"ಯ ಅನುಷ್ಠಾನವನ್ನು ಈ ಕೆಳಗಿನಂತೆ ಘೋಷಿಸಲಾಗಿದೆ.

**ಗಾಂಧಿ ಗ್ರಾಮ ಪುರಸ್ಕಾರ ಯೋಜನೆ:**

ರಾಜ್ಯದಲ್ಲಿ ಉತ್ತಮ ಆಡಳಿತ ಮತ್ತು ಆರ್ಥಿಕ ಸಾಧನೆ ಮಾಡಿರುವ ಗ್ರಾಮ ಪಂಚಾಯತಿಗಳನ್ನು ಗುರುತಿಸಿ ಅವುಗಳ ಕಾರ್ಯನಿರ್ವಹಣೆಯನ್ನು ಮತ್ತಷ್ಟು ಪ್ರೋತ್ಸಾಹಿಸುವ ಉದ್ದೇಶದಿಂದ "ಗಾಂಧಿ ಗ್ರಾಮ ಪುರಸ್ಕಾರ ಯೋಜನೆ" ನಾಮಾಂಕಿತ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯು 2013–14ನೇ ಆರ್ಥಿಕ ಸಾಲಿನಿಂದ ಪ್ರಾರಂಭಗೊಂಡು ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರಲಿದೆ. ಗಾಂಧಿ ಗ್ರಾಮ ಪುರಸ್ಕಾರ ಯೋಜನೆಯು ಸಂಪೂರ್ಣವಾಗಿ ರಾಜ್ಯ ಸರ್ಕಾರ ಪ್ರಾಯೋಜಿತ ಯೋಜನೆಯಾಗಿದೆ. ಗಾಂಧಿ ಗ್ರಾಮ ಪುರಸ್ಕಾರ ಯೋಜನೆಯಡಿ ಪ್ರತಿ ತಾಲ್ಲೂಕಿನಲ್ಲಿ ಉತ್ತಮ ಸಾಧನೆ ಮಾಡಿರುವ ಒಂದು ಗ್ರಾಮ ಪಂಚಾಯತ್ತಿಯನ್ನು ಗುರುತಿಸಿ ತಲಾ ರೂ.2.00 ಲಕ್ಷಗಳ (ರೂಪಾಯಿ ಎರಡು ಲಕ್ಷಗಳು ಮಾತ್ರ) ಉತ್ತೇಜನ ಅನುದಾನವನ್ನು ಕೊಡಮಾಡಲಾಗುವುದು.

**ಗಾಂಧಿ ಗ್ರಾಮ ಪುರಸ್ಕಾರ ಯೋಜನೆಯಡಿ ಪುರಸ್ಕಾರವನ್ನು ಪಡೆಯಲು ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಲು ಅಳವಡಿಸಿಕೊಳ್ಳಲಾದ ಪದ್ಧತಿಗಳು :**

(1) ಪುರಸ್ಕಾರಕ್ಕೆ ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಲು ಸಾಂಸ್ಥಿಕ ಮತ್ತು ಪ್ರಗತಿ ಸೂಚ್ಯಂಕಗಳಡಿ ಮಾನದಂಡಗಳನ್ನು ಲಗತ್ತಿಸಿದೆ. ಅನುಬಂಧ ಅ ಮತ್ತು ಬ ರಲ್ಲಿ ನಿರ್ದಿಷ್ಟಪಡಿಸಲಾಗಿದೆ. ಈ ಸೂಚ್ಯಂಕಗಳಡಿ ತಲಾ 75 ಅಂಕಗಳನ್ನು ನಿಗಧಿಪಡಿಸಿದ್ದು ಗೊತ್ತುಪಡಿಸಲಾದ ಒಟ್ಟು ಅಂಕಗಳು 150.

(2) ಗ್ರಾಮ ಪಂಚಾಯತಿಗಳು ಪುರಸ್ಕಾರಗಳನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಲು ಸೂಚ್ಯಂಕ ಸಹಿತ ತಯಾರಿಸಲಾದ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಒದಗಿಸಲಾಗುವುದು. ಪ್ರಶಸ್ತಿಗೆ ಗ್ರಾಮ ಪಂಚಾಯತಿಗಳನ್ನು ಪರಿಗಣಿಸಲು ಗ್ರಾಮ ಪಂಚಾಯತಿಯು ಪ್ರತಿಶತ 90 ಅಂದರೆ 135 ಅಂಕಗಳನ್ನು ಪಡೆದಿರಬೇಕು.

(3) ಪ್ರತಿ ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಜಂಟಿಯಾಗಿ ತಮ್ಮ ಡಿಜಿಟಲ್ ಸಹಿಯೊಂದಿಗೆ ದೃಢೀಕರಿಸಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡುವುದು.

(4) ಪ್ರತಿ ವರ್ಷ ಜನವರಿ1ರಿಂದ ಜನವರಿ20ರ ಅವಧಿಯಲ್ಲಿ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಲಭ್ಯಗೊಳಿಸಲಾಗುತ್ತದೆ.

(5) ಗ್ರಾಮ ಪಂಚಾಯತಿಗಳಿಂದ ಆನ್‌ಲೈನ್‌ನಲ್ಲಿ ಸಲ್ಲಿಕೆಯಾಗುವ ಅರ್ಜಿಗಳ ಪೈಕಿ ಪ್ರತಿ ತಾಲ್ಲೂಕಿನಲ್ಲಿ ಅಂಕಗಳ ಆಧಾರದಲ್ಲಿ ಪ್ರಥಮ ಐದು ಸ್ಥಾನಗಳನ್ನು ಪಡೆಯುವ ಗ್ರಾಮ ಪಂಚಾಯತಿಗಳ ಪ್ರಸ್ತಾವನೆಗಳನ್ನು ದಿನಾಂಕ: 21.01.2014 ರಿಂದ 30.01.2014ರ ಅವಧಿಯಲ್ಲಿ ಮೂರನೇ ವ್ಯಕ್ತಿಯಿಂದ ಮೌಲ್ಯಮಾಪನಗೊಳಿಸಲಾಗುವುದು.

(6) ಫೆಬ್ರವರಿ 2014ರ ಕೊನೆಯ ವಾರ ಅಥವಾ ಮಾರ್ಚ್ 2014ರ ಮೊದಲ ವಾರದಲ್ಲಿ ಗ್ರಾಮ ಪಂಚಾಯತಿಗಳಿಗೆ ಪುರಸ್ಕಾರಗಳನ್ನು ಸರ್ಕಾರದಿಂದ ಘೋಷಿಸಲಾಗುವುದು.

**ಗೊತ್ತುಪಡಿಸಲಾದ ವೇಳಾಪಟ್ಟಿ :**

- ಆನ್‌ಲೈನ್‌ನಲ್ಲಿ ಅರ್ಜಿಯ ಲಭ್ಯತೆ ಮತ್ತು ಗ್ರಾಮ ಪಂಚಾಯತಿಗಳು ಅರ್ಜಿಯನ್ನು ಸಲ್ಲಿಸುವ ಅವಧಿ **ದಿನಾಂಕ:01.01.2014 ರಿಂದ ದಿನಾಂಕ:20.01.2014ರವರೆಗೆ.**
- ಮೂರನೇ ವ್ಯಕ್ತಿಯ ಮೌಲ್ಯಮಾಪನ ಅವಧಿ **ದಿನಾಂಕ:21.01.2014 ರಿಂದ 30.01.2014ರವರೆಗೆ.**

* ಸರ್ಕಾರದಿಂದ ಪುರಸ್ಕಾರಗಳ ಘೋಷಣೆ ಫೆಬ್ರವರಿ 2014ರ ಕೊನೆಯ ವಾರ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
23/11/13
(ಎಲ್.ಸಿ.ಬಸವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
23.11.13

**ಇವರಿಗೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ರಾಜ್ಯದ ಎಲ್ಲಾ ಜಿಲ್ಲೆಗಳು.
2. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ರಾಜ್ಯದ ಎಲ್ಲಾ ತಾಲ್ಲೂಕುಗಳು.
3. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು (ಆಯಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯ ಮುಖಾಂತರ)
4. ಕರ್ನಾಟಕ ವಿಕಾಸ ಮಾಸಪತ್ರಿಕೆಯಲ್ಲಿ ಪ್ರಕಟಿಸಲು.
5. ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
6. ಶಾಖಾ ರಕ್ಷಾಕಡತಕ್ಕೆ / ಹೆಚ್ಚುವರಿ ಪ್ರತಿ

**ಪ್ರತಿಯನ್ನು ಮಾಹಿತಿಗಾಗಿ :**

1. ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗು ಅಭಿವೃದ್ಧಿ ಆಯುಕ್ತರು ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸನ್ಮಾನ್ಯ ಮುಖ್ಯಮಂತ್ರಿಗಳ ಸಚಿವಾಲಯ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಎಲ್ಲಾ ನಿರ್ದೇಶಕರುಗಳು, ಗ್ರಾ.ಅ.ಪಂ.ರಾಜ್ ಇಲಾಖೆ.
7. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ.ಪಂ.ರಾಜ್ ಇಲಾಖೆ.
8. ಸರ್ಕಾರದ ಅಪರ ಕಾರ್ಯದರ್ಶಿ/ಉಪಕಾರ್ಯದರ್ಶಿ (ಆಡಳಿತ), ಗ್ರಾ.ಅ.ಪಂ.ರಾಜ್ ಇಲಾಖೆ.
9. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಗ್ರಾ.ಅ.ಪಂ.ರಾಜ್ ಇಲಾಖೆ.
10. ನಿರ್ದೇಶಕರು, ಅಬ್ದುಲ್ ನಜೀರ್-ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು.

ಅನುಬಂಧ–ಅ -

ಪ್ರಗತಿ ಸೂಚ್ಯಂಕಗಳು, 2012–13ನೇ ಆರ್ಥಿಕ ಸಾಲಿನ ಸಾಧನೆಗಳನ್ನು ಪರಿಗಣಿಸಿ
(ನಿಗಧಿಪಡಿಸಲಾದ ಒಟ್ಟು ಅಂಕಗಳು – 75):

| ಕ್ರ. ಸಂ. | ಮಾನದಂಡಗಳು | ನಿಗಧಿಪಡಿಸಲಾದ ಅಂಕಗಳು |
|---|---|---|
| 1 | 2 | 3 |
| 1 | ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಒದಗಿಸಲಾದ ಪ್ರತಿಶತ ಉದ್ಯೋಗಗಳು ಮತ್ತು ಅನುದಾನ ವಿನಿಯೋಗ<br>ಗರಿಷ್ಟ ಅಂಕಗಳು –5 | ಶೇಕಡ 90ಕ್ಕಿಂತ ಹೆಚ್ಚು – 5 |
| | | ಶೇಕಡ 80ಕ್ಕಿಂತ ಹೆಚ್ಚು 90ಕ್ಕಿಂತ ಕಡಿಮೆ – 3 |
| | | ಶೇಕಡ 50ಕ್ಕಿಂತ ಹೆಚ್ಚು 80ಕ್ಕಿಂತ ಕಡಿಮೆ – 2 |
| | | ಶೇಕಡ 50ಕ್ಕಿಂತ ಕಡಿಮೆ – 1 |
| 2 | ವೈಯಕ್ತಿಕ ಕುಡಿಯುವ ನೀರಿನ ನಲ್ಲಿ ಸಂಪರ್ಕಗಳು<br>ಗರಿಷ್ಟ ಅಂಕಗಳು –7 | ಶೇಕಡ 80ಕ್ಕಿಂತ ಹೆಚ್ಚು – 7 |
| | | ಶೇಕಡ 60ರಿಂದ 80ರವರೆಗೆ–5 |
| | | ಶೇಕಡ 40ರಿಂದ 60ರವರೆಗೆ–3 |
| | | ಶೇಕಡ 20ರಿಂದ 40ರವರೆಗೆ–1 |
| 3 | ವಸತಿ ಯೋಜನೆಗಳ ಅನುಷ್ಠಾನ<br>ಗರಿಷ್ಟ ಅಂಕಗಳು –5 | ವಸತಿ ರಹಿತ ಕುಟುಂಬಗಳ ಗುರುತಿಸುವಿಕೆಗೆ ಎದುರಾಗಿ ಮನೆ ಒದಗಿಸುವಿಕೆ ಪ್ರಮಾಣ ಶೇ 90ಕ್ಕಿಂತ ಹೆಚ್ಚಿದ್ದರೆ – 5 |
| | | ವಸತಿ ರಹಿತ ಕುಟುಂಬಗಳ ಗುರುತಿಸುವಿಕೆಗೆ ಎದುರಾಗಿ ಮನೆ ಒದಗಿಸುವಿಕೆ ಪ್ರಮಾಣ ಶೇ 75 ಕ್ಕಿಂತ ಹೆಚ್ಚಿದ್ದರೆ – 3 |
| | | ವಸತಿ ರಹಿತ ಕುಟುಂಬಗಳ ಗುರುತಿಸುವಿಕೆಗೆ ಎದುರಾಗಿ ಮನೆ ಒದಗಿಸುವಿಕೆ ಪ್ರಮಾಣ ಶೇ 50 ಕ್ಕಿಂತ ಹೆಚ್ಚಿದ್ದರೆ – 2 |
| | | ವಸತಿ ರಹಿತ ಕುಟುಂಬಗಳ ಗುರುತಿಸುವಿಕೆಗೆ ಎದುರಾಗಿ ಮನೆ ಒದಗಿಸುವಿಕೆ ಪ್ರಮಾಣ ಶೇ 50 ಕ್ಕಿಂತ ಕಡಿಮೆ ಇದ್ದರೆ – 1 |
| 4 | ವೈಯಕ್ತಿಕ ಶೌಚಾಲಯಗಳ ನಿರ್ಮಾಣ<br>ಗರಿಷ್ಟ ಅಂಕಗಳು – 7 | ಶೇಕಡ 90ಕ್ಕಿಂತ ಹೆಚ್ಚು ಸಾಧನೆ – 7 |
| | | ಶೇಕಡ 70ಕ್ಕಿಂತ ಹೆಚ್ಚು ಮತ್ತು ಶೇಕಡ 90ಕ್ಕಿಂತ ಕಡಿಮೆ ಸಾಧನೆ – 5 |
| | | ಶೇಕಡ 50ಕ್ಕಿಂತ ಹೆಚ್ಚು ಮತ್ತು ಶೇಕಡ 70ಕ್ಕಿಂತ ಕಡಿಮೆ ಸಾಧನೆ – 3 |
| | | ಶೇಕಡ 50ಕ್ಕಿಂತ ಕಡಿಮೆ ಸಾಧನೆ – 1 |
| 5 | 13ನೇ ಹಣಕಾಸು ಆಯೋಗ ಅನುದಾನ ವಿನಿಯೋಗ<br>ಗರಿಷ್ಟ ಅಂಕಗಳು – 5 | ಶೇಕಡ 95ಕ್ಕಿಂತ ಹೆಚ್ಚು ಸಾಧನೆ – 5 |
| | | ಶೇಕಡ 75ಕ್ಕಿಂತ ಹೆಚ್ಚು ಮತ್ತು ಶೇಕಡ 95ಕ್ಕಿಂತ ಕಡಿಮೆ ಸಾಧನೆ – 3 |
| | | ಶೇಕಡ 50ಕ್ಕಿಂತ ಹೆಚ್ಚು ಮತ್ತು ಶೇಕಡ 75ಕ್ಕಿಂತ ಕಡಿಮೆ ಸಾಧನೆ – 2 |
| | | ಶೇಕಡ 50ಕ್ಕಿಂತ ಕಡಿಮೆ ಸಾಧನೆ – 1 |
| 6 | ಶಾಸನಬದ್ಧ ಅನುದಾನದ ವಿನಿಯೋಗ<br>ಗರಿಷ್ಟ ಅಂಕಗಳು – 5 | ಶೇಕಡ 95ಕ್ಕಿಂತ ಹೆಚ್ಚು ಸಾಧನೆ – 5 |
| | | ಶೇಕಡ 75ಕ್ಕಿಂತ ಹೆಚ್ಚು ಮತ್ತು ಶೇಕಡ 95ಕ್ಕಿಂತ ಕಡಿಮೆ ಸಾಧನೆ – 3 |
| | | ಶೇಕಡ 50ಕ್ಕಿಂತ ಹೆಚ್ಚು ಮತ್ತು ಶೇಕಡ 75ಕ್ಕಿಂತ ಕಡಿಮೆ ಸಾಧನೆ – 2 |
| | | ಶೇಕಡ 50ಕ್ಕಿಂತ ಕಡಿಮೆ ಸಾಧನೆ – 1 |
| 7 | ಡಿಸೆಂಬರ್ 2013ರ ಅಂತ್ಯಕ್ಕೆ ತೆರಿಗೆ ವಸೂಲಾತಿ ಪ್ರಗತಿ<br>ಗರಿಷ್ಟ ಅಂಕಗಳು – 7 | ಚಾಲ್ತಿ ಬೇಡಿಕೆಯ ಶೇಕಡ 80ಕ್ಕಿಂತ ಹೆಚ್ಚು – 7 |
| | | ಚಾಲ್ತಿ ಬೇಡಿಕೆಯ ಶೇಕಡ 80ಕ್ಕಿಂತ ಕಡಿಮೆ ಮತ್ತು ಶೇಕಡ 70ಕ್ಕಿಂತ ಹೆಚ್ಚು – 6 |
| | | ಚಾಲ್ತಿ ಬೇಡಿಕೆಯ ಶೇಕಡ 70ಕ್ಕಿಂತ ಕಡಿಮೆ ಮತ್ತು ಶೇಕಡ 60ಕ್ಕಿಂತ ಹೆಚ್ಚು – 5 |
| | | ಚಾಲ್ತಿ ಬೇಡಿಕೆಯ ಶೇಕಡ 60ಕ್ಕಿಂತ ಕಡಿಮೆ ಮತ್ತು ಶೇಕಡ 50ಕ್ಕಿಂತ ಹೆಚ್ಚು – 3 |

| | | |
|---|---|---|
| | | ಚಾಲ್ತಿ ಬೇಡಿಕೆಯ ಶೇಕಡ 50ಕ್ಕಿಂತ ಕಡಿಮೆ – 1 |
| 8 | ನೀರಿನ ತೆರಿಗೆ ವಸೂಲಾತಿ<br>ಗರಿಷ್ಠ ಅಂಕಗಳು –5 | ಶೇಕಡ 95ಕ್ಕಿಂತ ಹೆಚ್ಚು – 5 |
| | | ಶೇಕಡ 75ರಿಂದ 95ರವರೆಗೆ–4 |
| | | ಶೇಕಡ 50ರಿಂದ 75ರವರೆಗೆ–2 |
| | | ಶೇಕಡ 50ಕ್ಕಿಂತ–0 |
| 9 | ಘನ ತ್ಯಾಜ್ಯ ನಿರ್ವಹಣೆ ವ್ಯವಸ್ಥೆ<br>ಗರಿಷ್ಠ ಅಂಕಗಳು – 7 | ಅಳವಡಿಸಿಕೊಂಡಿದ್ದಲ್ಲಿ – 7 |
| | | ಪ್ರಾರಂಭಿಕ ಹಂತದಲ್ಲಿದ್ದರೆ –3 |
| | | ಇಲ್ಲಾ ಎಂದಾದಲ್ಲಿ – 0 |
| 10 | ಸಕಾಲ ಸೇವೆಗಳು<br>ಗರಿಷ್ಠ ಅಂಕಗಳು – 7 | ನಿಗಧಿತ ಕಾಲದಲ್ಲಿ ಸೇವೆಗಳನ್ನು ಒದಗಿಸಿರುವುದು – 7 |
| | | ಸೇವೆ ಒದಗಿಸಲಾಗಿದೆ–ತಾಂತ್ರಿಕ ಕಾರಣದಿಂದ ತಂತ್ರಾಂಶದಲ್ಲಿ ಅಳವಡಿಸಲಾಗಿರುವುದಿಲ್ಲ.–3 |
| | | ನಿಗಧಿತ ಕಾಲದಲ್ಲಿ ಸೇವೆಗಳನ್ನು ಒದಗಿಸದಿರುವುದು ಮತ್ತು ದಂಡನೆಗೆ ಒಳಗಾಗಿರುವುದು – 0 |
| 11 | ಸರ್ಕಾರದ ಅನುದಾನೇತರ ಸ್ವಂತ ಸಂಪನ್ಮೂಲ ಸಂಗ್ರಹಣೆ 2012–13 ನೇ ಸಾಲಿಗೆ ಹೋಲಿಸಿದಲ್ಲಿ 2013–14 ನೇ ಸಾಲಿಗೆ ಹೆಚ್ಚಳವಾಗದೆಯೇ?<br>ಗರಿಷ್ಠ ಅಂಕ –3 | ಹೌದು ಎಂದಾದಲ್ಲಿ – 3 |
| | | ಇಲ್ಲಾ ಎಂದಾದಲ್ಲಿ –0 |
| 12 | ಗ್ರಾಮ ಪಂಚಾಯತಿ ಆಸ್ತಿಗಳ ಒತ್ತುವರಿಗಳನ್ನು ತೆರವುಗೊಳಿಸಿರುವುದು<br>ಗರಿಷ್ಠ ಅಂಕಗಳು – 5 | ಹೌದು ಎಂದಾದಲ್ಲಿ – 5 |
| | | ಭಾಗಶಃ ತೆರವು – 3 |
| | | ಇಲ್ಲಾ ಎಂದಾದಲ್ಲಿ –0 |
| 13 | ವಿದ್ಯುತ್ ಶಕ್ತಿ ಬಿಲ್ಲನ್ನು ಪಾವತಿ ಮಾಡುವುದು<br>ಗರಿಷ್ಠ ಅಂಕಗಳು –7 | ಶೇಕಡ 90ಕ್ಕಿಂತ ಹೆಚ್ಚು – 7 |
| | | ಶೇಕಡ 75ರಿಂದ 90ರವರೆಗೆ–5 |
| | | ಶೇಕಡ 50ರಿಂದ 75ರವರೆಗೆ–3 |
| | | ಶೇಕಡ 50ಕ್ಕಿಂತ–0 |

23/11/13

(ಎಲ್.ಸಿ.ಬಸವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

23.11.13

ಅನುಬಂಧ–ಬ

(ಅ) ಸಾಂಸ್ಥಿಕ ಸೂಚ್ಯಂಕಗಳು, ಏಪ್ರಿಲ್– ಡಿಸೆಂಬರ್ 2013ರ ಅವಧಿಯಲ್ಲಿನ ಸಾಧನೆಗಳನ್ನು ಪರಿಗಣಿಸಿ
(ನಿಗಧಿಪಡಿಸಲಾದ ಒಟ್ಟು ಅಂಕಗಳು – 75):

| ಕ್ರ. ಸಂ. | ಮಾನದಂಡಗಳು | ನಿಗಧಿಪಡಿಸಲಾದ ಅಂಕಗಳು |
|---|---|---|
| 1 | 2 | 3 |
| 1 | ವಾರ್ಷಿಕ ಕ್ರಿಯಾ ಯೋಜನೆಗಳನ್ನು ಗ್ರಾ.ಪಂ. ಕಛೇರಿ ಕಟ್ಟಡಗಳ ಮೇಲೆ ಬರೆಯಿಸುವುದು<br>ಗರಿಷ್ಟ ಅಂಕಗಳು – 5 | ಹೌದು ಎಂದಾದಲ್ಲಿ – 5 |
| | | ಇಲ್ಲಾ ಎಂದಾದಲ್ಲಿ – 0 |
| 2 | ಗ್ರಾ. ಪಂ.ಗಳ ಎಲ್ಲಾ ಆಸ್ತಿಗಳ ವಿವರಗಳನ್ನು ಆಸ್ತಿ ವಹಿಯಲ್ಲಿ ನಮೂದಿಸುವುದು ಮತ್ತು ಗ್ರಾ.ಪಂ. ಕಛೇರಿ ಕಟ್ಟಡಗಳ ಮೇಲೆ ಬರೆಯಿಸುವುದು<br>ಗರಿಷ್ಟ ಅಂಕಗಳು -5 | ಹೌದು ಎಂದಾದಲ್ಲಿ – 5 |
| | | ಇಲ್ಲಾ ಎಂದಾದಲ್ಲಿ – 0 |
| 3 | ಕಳೆದ ನಾಲ್ಕು ವರ್ಷಗಳಲ್ಲಿ ಆಸ್ತಿ ತೆರಿಗೆ ಪರಿಷ್ಕರಣೆ ಮಾಡಲಾಗಿದೆಯೇ ?<br>ಗರಿಷ್ಟ ಅಂಕಗಳು – 6 | ಹೌದು ಎಂದಾದಲ್ಲಿ – 6 |
| | | ಇಲ್ಲಾ ಎಂದಾದಲ್ಲಿ – 0 |
| 4 | ಕಳೆದ ನಾಲ್ಕು ವರ್ಷಗಳಲ್ಲಿ ನೀರಿನ ತೆರಿಗೆ ಪರಿಷ್ಕರಣೆ ಮಾಡಲಾಗಿದೆಯೇ ?<br>ಗರಿಷ್ಟ ಅಂಕಗಳು – 6 | ಹೌದು ಎಂದಾದಲ್ಲಿ – 6 |
| | | ಇಲ್ಲಾ ಎಂದಾದಲ್ಲಿ – 0 |
| 5 | ವರ್ಷವೊಂದರಲ್ಲಿ ನಡೆಸಲಾದ ಗ್ರಾಮ ಸಭೆಗಳ ಸಂಖ್ಯೆ, ಗ್ರಾಮ ಸಭೆಗಳ ವಿಡಿಯೋ ಚಿತ್ರೀಕರಣ ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು.<br>ಗರಿಷ್ಟ ಅಂಕಗಳು – 5 | ನಡೆಸಲಾದ ಗ್ರಾಮ ಸಭೆಗಳ ಸಂಖ್ಯೆ 2 ಅಥವಾ 2ಕ್ಕಿಂತ ಹೆಚ್ಚು, ವಿಡಿಯೋ ಚಿತ್ರೀಕರಣ ಮಾಡಲಾಗಿದೆ ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆ – 5 |
| | | ನಡೆಸಲಾದ ಗ್ರಾಮ ಸಭೆಗಳ ಸಂಖ್ಯೆ 2 ಅಥವಾ 2ಕ್ಕಿಂತ ಹೆಚ್ಚು, ವಿಡಿಯೋ ಚಿತ್ರೀಕರಣ ಮಾಡಿರುವುದಿಲ್ಲ ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದಿಲ್ಲ – 3 |
| | | ನಡೆಸಲಾದ ಗ್ರಾಮ ಸಭೆಗಳ ಸಂಖ್ಯೆ 2ಕ್ಕಿಂತ ಕಡಿಮೆ, ವಿಡಿಯೋ ಚಿತ್ರೀಕರಣ ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು – 0 |
| 6 | ನಡೆಸಲಾದ ಗ್ರಾಮ ಪಂಚಾಯತಿ ಮಾಸಿಕ ಸಭೆಗಳು ಮತ್ತು ಈ ಸಭೆಗಳ ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು<br>ಗರಿಷ್ಟ ಅಂಕಗಳು – 5 | ಪ್ರತಿ ಮಾಹೆ ಸಾಮಾನ್ಯ ಸಭೆಯನ್ನು ನಡೆಸಲಾಗಿದೆ ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆ – 5 |
| | | ಪ್ರತಿ ಮಾಹೆ ಸಾಮಾನ್ಯ ಸಭೆಯನ್ನು ನಡೆಸಲಾಗಿದೆ ಆದರೆ ನಡೆವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದಿಲ್ಲ – 4 |
| | | ಪ್ರತಿ ಮಾಹೆ ಸಾಮಾನ್ಯ ಸಭೆಗಳನ್ನು ನಿಯಮಿತವಾಗಿ ನಡೆಸಲಾಗಿರುವುದಿಲ್ಲ ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದಿಲ್ಲ – 2 |
| 8 | ನಿಗಧಿತ ಕಾಲಾವಧಿಯಲ್ಲಿ ಜಮಾಬಂಧಿ ನಡೆಸಿರುವುದು ಹಾಗೂ ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು<br>ಗರಿಷ್ಟ ಅಂಕಗಳು – 4 | ಹೌದು ಎಂದಾದಲ್ಲಿ –4 |
| | | ಇಲ್ಲಾ ಎಂದಾದಲ್ಲಿ – 0 |
| 9 | ಗ್ರಾಮ ಪಂಚಾಯಿತಿ ಆಸ್ತಿಗಳಿಗೆ ಕಲ್ಪಿಸಲಾಗಿರುವ ವಿದ್ಯುಚ್ಛಕ್ತಿ ಸಂಪರ್ಕಗಳಿಗೆ ಆರ್.ಆರ್. ನಂಬರನ್ನು ನೀಡಿರುವುದು ಮತ್ತು ವಿವರಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು<br>ಗರಿಷ್ಟ ಅಂಕಗಳು – 5 | ಗ್ರಾಮ ಪಂಚಾಯಿತಿ ಎಲ್ಲಾ ಆಸ್ತಿಗಳಿಗೆ ವಿದ್ಯುಚ್ಛಕ್ತಿ ಸಂಪರ್ಕಗಳಿಗೆ ಆರ್.ಆರ್. ನಂಬರನ್ನು ನೀಡಿದ್ದರೆ–5 |
| | | ಗ್ರಾಮ ಪಂಚಾಯಿತಿ ಶೇಕಡಾ 70 ಕ್ಕಿಂತ ಹೆಚ್ಚು ಶೇಕಡಾ 100 ಕ್ಕಿಂತ ಕಡಿಮೆ ಆಸ್ತಿಗಳಿಗೆ ವಿದ್ಯುಚ್ಛಕ್ತಿ ಸಂಪರ್ಕಗಳಿಗೆ ಆರ್.ಆರ್. ನಂಬರನ್ನು ನೀಡಿದ್ದರೆ–4 |
| | | ಗ್ರಾಮ ಪಂಚಾಯಿತಿ ಶೇಕಡಾ 50 ಕ್ಕಿಂತ ಹೆಚ್ಚು ಶೇಕಡಾ 70 ಕ್ಕಿಂತ ಕಡಿಮೆ ಆಸ್ತಿಗಳಿಗೆ ವಿದ್ಯುಚ್ಛಕ್ತಿ ಸಂಪರ್ಕಗಳಿಗೆ ಆರ್.ಆರ್. ನಂಬರನ್ನು ನೀಡಿದ್ದರೆ–3 |
| | | ಗ್ರಾಮ ಪಂಚಾಯಿತಿ ಶೇಕಡಾ 50 ಕ್ಕಿಂತ ಹೆಚ್ಚು ಶೇಕಡಾ 30 ಕ್ಕಿಂತ ಕಡಿಮೆ ಆಸ್ತಿಗಳಿಗೆ ವಿದ್ಯುಚ್ಛಕ್ತಿ ಸಂಪರ್ಕಗಳಿಗೆ ಆರ್.ಆರ್. ನಂಬರನ್ನು ನೀಡಿದ್ದರೆ–2 |

| | | |
|---|---|---|
| 11 | ಚಾಲ್ತಿ ವರ್ಷದ ಲೆಕ್ಕಪತ್ರಗಳನ್ನು ದ್ವಿ ನಮೂದು ಲೆಕ್ಕ ಪತ್ರ ಪದ್ಧತಿಯಲ್ಲಿ ನಿರ್ವಹಿಸಿ 30ನೇ ಸೆಪ್ಟೆಂಬರ್ 2013 ರೊಳಗೆ ಅಂತಿಮಗೊಳಿಸಿರುವುದು<br>ಗರಿಷ್ಠ ಅಂಕಗಳು – 5 | ಹೌದು ಎಂದಾದಲ್ಲಿ – 5<br>ಇಲ್ಲಾ ಎಂದಾದಲ್ಲಿ–0 |
| 12 | 2012–13 ನೇ ಸಾಲಿನ ಲೆಕ್ಕಪತ್ರಗಳನ್ನು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲದಿಂದ ಪರಿಶೋಧನೆ ಮಾಡಿಸಿರುವುದು<br>ಗರಿಷ್ಠ ಅಂಕಗಳು – 5 | ಹೌದು ಎಂದಾದಲ್ಲಿ – 5<br>ಇಲ್ಲಾ ಎಂದಾದಲ್ಲಿ – 0 |
| 13 | 2012–13 ನೇ ಸಾಲಿನ ಲೆಕ್ಕಪತ್ರಗಳ ಪರಿಶೋಧನೆ ಆಕ್ಷೇಪಣೆಗಳಿಗೆ ಅನುಪಾಲನಾ ಕ್ರಮಗಳನ್ನು ವಹಿಸಿರುವ ಕುರಿತು<br>ಗರಿಷ್ಠ ಅಂಕಗಳು – 5 | ಹೌದು ಎಂದಾದಲ್ಲಿ – 5<br>ಇಲ್ಲಾ ಎಂದಾದಲ್ಲಿ – 0 |
| 14 | 2013–14 ನೇ ಸಾಲಿನ ಗ್ರಾಮ ಪಂಚಾಯತಿ ಮಾಸಿಕ ಸಭೆಗಳು ಮತ್ತು ಈ ಸಭೆಗಳ ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು<br>ಗರಿಷ್ಠ ಅಂಕಗಳು – 5 | ಪ್ರತಿ ಮಾಹೆ ಸಾಮಾನ್ಯ ಸಭೆಯನ್ನು ನಡೆಸಲಾಗಿದೆ ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆ – 5<br>ಪ್ರತಿ ಮಾಹೆ ಸಾಮಾನ್ಯ ಸಭೆಯನ್ನು ನಡೆಸಲಾಗಿದೆ ಆದರೆ ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದಿಲ್ಲ – 4<br>ಪ್ರತಿ ಮಾಹೆ ಸಾಮಾನ್ಯ ಸಭೆಗಳನ್ನು ನಿಯಮಿತವಾಗಿ ನಡೆಸಲಾಗಿರುವುದಿಲ್ಲ ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದಿಲ್ಲ – 2 |
| 15 | 2013–14 ನೇ ಸಾಲಿನಲ್ಲಿ ನಡೆಸಲಾದ ಗ್ರಾಮ ಸಭೆಗಳ ಸಂಖ್ಯೆ, ಗ್ರಾಮ ಸಭೆಗಳ ವಿಡಿಯೋ ಚಿತ್ರೀಕರಣ ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು.<br>ಗರಿಷ್ಠ ಅಂಕಗಳು – 5 | 2013–14 ನೇ ಸಾಲಿನಲ್ಲಿ ನಡೆಸಲಾದ ಗ್ರಾಮ ಸಭೆಗಳ ಸಂಖ್ಯೆ 2 ಅಥವಾ 2ಕ್ಕಿಂತ ಹೆಚ್ಚು, ವಿಡಿಯೋ ಚಿತ್ರೀಕರಣ ಮಾಡಲಾಗಿದೆ ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆ – 5<br>2013–14 ನೇ ಸಾಲಿನಲ್ಲಿ ನಡೆಸಲಾದ ಗ್ರಾಮ ಸಭೆಗಳ ಸಂಖ್ಯೆ 2 ಅಥವಾ 2ಕ್ಕಿಂತ ಹೆಚ್ಚು, ವಿಡಿಯೋ ಚಿತ್ರೀಕರಣ ಮಾಡಿರುವುದಿಲ್ಲ ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದಿಲ್ಲ – 3<br>2013–14 ನೇ ಸಾಲಿನಲ್ಲಿ ನಡೆಸಲಾದ ಗ್ರಾಮ ಸಭೆಗಳ ಸಂಖ್ಯೆ 2ಕ್ಕಿಂತ ಕಡಿಮೆ, ವಿಡಿಯೋ ಚಿತ್ರೀಕರಣ ಮತ್ತು ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು – 0 |
| 16 | 2013–14 ನೇ ಸಾಲಿನ ಮಾಸಿಕ ಬ್ಯಾಂಕ್ ಲೆಕ್ಕ ಮರುಹೊಂದಾಣಿಕೆ (ಬಿಆರ್‌ಎಸ್) ವರದಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು<br>ಗರಿಷ್ಠ ಅಂಕಗಳು – 4 | ಹೌದು ಎಂದಾದಲ್ಲಿ – 4<br>ಇಲ್ಲಾ ಎಂದಾದಲ್ಲಿ – 0 |
| 17 | 2012–13 ನೇ ಸಾಲಿಗೆ ಹೋಲಿಸಿದಲ್ಲಿ 2013–14 ನೇ ಸಾಲಿಗೆ ಗ್ರಾಮ ಸಭೆಗಳಲ್ಲಿ ಭಾಗವಹಿಸುವ ನಾಗರೀಕರ ಸಂಖ್ಯೆ<br>ಗರಿಷ್ಠ ಅಂಕ –5 | ಗ್ರಾಮ ಪಂಚಾಯಿತಿಯ ಶೇಕಡಾ 40 ಕ್ಕಿಂತ ಹೆಚ್ಚು– 5<br>ಗ್ರಾಮ ಪಂಚಾಯಿತಿಯ ಶೇಕಡಾ 30 ಕ್ಕಿಂತ ಹೆಚ್ಚು ಶೇಕಡಾ 20 ಕ್ಕಿಂತ – 3<br>ಗ್ರಾಮ ಪಂಚಾಯಿತಿಯ ಶೇಕಡಾ 20 ಕ್ಕಿಂತ ಹೆಚ್ಚು ಶೇಕಡಾ 10 ಕ್ಕಿಂತ – 1 |

23/11/13

(ಎಲ್.ಸಿ.ಬಸವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

23.11.13